ಅಧ್ಯಕ್ಷರು : ಎನ್.ಎ.ಹ್ಯಾರೀಸ್ ಅವರು ಇಲ್ಲ, ಸುನೀಲ್ ಹೆಗಡೆಯವರು ನೀವು ಕೇಳಿ.

ಪ್ರಶ್ನೆ ಸಂಖ್ಯೆ: 08 (31)
ಎನ್.ಎ. ಹ್ಯಾರೀಸ್‌ರವರು
(ಮಾನ್ಯ ಸದಸ್ಯರು ಗೈರುಹಾಜರಿದ್ದರು)

ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮೂಲಭೂತ ಸೌಕರ್ಯಗಳು
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 9 (04)

ಶ್ರೀ ಸುನೀಲ್ ವಿ. ಹೆಗಡೆ (ಹಳಿಯಾಳ)

ಅ) ಜೋಯಿಡಾ ತಾಲ್ಲೂಕಿನ ರಾಮನಗರವು ನಿರಾಶ್ರಿತರ ಪುನರ್ವಸತಿಗಾಗಿ ನಿರ್ಮಾಣ ಮಾಡಿದ ನಗರವಾಗಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಯ ಕಟ್ಟಡವು ಶಿಥಿಲಾ ವ್ಯವಸ್ಥೆಯಲ್ಲಿದ್ದು, ಮೂಲಭೂತ ಸೌಕರ್ಯಗಳ ಕೊರತೆ ಹಾಗೂ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಿದ್ದಲ್ಲಿ, ಪಸಕ್ತ ಸಾಲಿನಲ್ಲಿಯೇ ಈ ಕೊರತೆಗಳನ್ನು ನೀಗಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಇ) ಸದರಿ ಆಸ್ಪತ್ರೆಯನ್ನು 60 ಹಾಸಿಗೆಗಳ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲು ಸರ್ಕಾರವು ಪ್ರಸಕ್ತ ಸಾಲಿನಲ್ಲಿ ಕ್ರಮ ಕೈಗೊಳ್ಳುವುದೇ;

ಈ) ಹುಳಿಯಾಳ – ಜೋಯಿಡಾ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಮುರ್ಕವಾಡ, ಹಳಿಯಾಳ, ಸಾಂಬ್ರಾಣಿ, ಬೆಳವಟಿಗಿ, ಭಗವತಿ, ಮಂಗಳವಾಡ, ಯಡೋಗ, ಜೋಯಿಡಾ ಹಾಗೂ ಉಳವಿ ಗ್ರಾಮಗಳಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ವೈದ್ಯಕೇತರ ಸಿಬ್ಬಂದಿಗಳಿಗೆ ವಸತಿ ಮತ್ತು ಇನ್ನಿತರ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಊ) ಹಾಗಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಹಾಗೂ ಕೈಗೊಳ್ಳಲಾಗುವ ಕ್ರಮಗಳೇನು;

ಋ) ಪ್ರಸಕ್ತ ಸಾಲಿನಲ್ಲಿಯೇ ಅಗತ್ಯ ಸೌಕರ್ಯಗಳನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ವಿವರ ಒದಗಿಸುವುದು)

ಶ್ರೀ ಅರವಿಂದಾ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಬಂದಿರುತ್ತದೆ

ಆ) 2012–13 ನೇ ಸಾಲಿನ ವಾರ್ಷಿಕ ಕ್ರಿಯಾ ಯೋಜನೆಯಡಿಯಲ್ಲಿ ರೂ. 75,000/– ಗಳನ್ನು ಕಟ್ಟಡ ರಿಪೇರಿಗಾಗಿ ಮಂಜೂರು ಮಾಡಲಾಗಿದೆ.

ಇ) ರಾಜ್ಯದಲ್ಲಿ ಹೊಸ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವುದು ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಮುದಾಯ ಆರೋಗ್ಯ ಕೇಂದ್ರಗಳು ಮತ್ತು ಸಾರ್ವಜನಿಕ ಆಸ್ಪತ್ರೆ ಇತ್ಯಾದಿಗಳ ಮೇಲ್ದರ್ಜೆಗೇರಿಸುವಿಕೆಯನ್ನು ಒಂದು ನೀತಿ ನಿರ್ಣಯವಾಗಿ 3 ವರ್ಷಗಳ ಅವಧಿಗೆ ಸರ್ಕಾರವು ತಡೆಹಿಡಿದಿದೆ. ಆದ್ದರಿಂದ, ಸಧ್ಯದಲ್ಲಿ ಸದರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಲು ಅವಕಾಶವಿರುವುದಿಲ್ಲ.

ಈ) ಹಳಿಯಾಳ – ಜೋಯಿಡಾ ವಿಧಾನ ಸಭಾಕ್ಷೇತ್ರ ವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯರು ಮತ್ತು ವೈದ್ಯರೇತರ ಸಿಬ್ಬಂದಿಗಳಿಗೆ ಒದಗಿಸಲಾದ ವಸತಿ ಗೃಹಗಳ ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ಉ) ಮತ್ತು ಊ) ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಮತ್ತು ವೈದ್ಯರೇತರ ಸಿಬ್ಬಂದಿಗಳಿಗೆ ಅಗತ್ಯ ವಸತಿ ಗೃಹಗಳನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ ಒದಗಿಸಲಾಗುವುದು.

ಹಳಿಯಾಳ ತಾಲ್ಲೂಕು ವಸತಿ ಗೃಹಗಳ ಮಾಹಿತಿ

ಕ್ರ.ಸಂ.	ಆರೋಗ್ಯ ಸಂಸ್ಥೆಗಳ ಹೆಸರು	ವಸತಿ ಗೃಹಗಳು							
		ವೈದ್ಯಾಧಿಕಾರಿ	ಶುಶ್ರೂಷಕಿ	ಹಿ.ಪು.ಆ.ಸ	ಹಿ.ಮ.ಆ.ಸ	ಕ್ಷೇ.ಆ.ಶಿ	ವಾಹನ ಚಾಲಕ	ಗ್ರೂಪ್ ಡಿ	ಕಿ.ಮ.ಆ.ಸ ಉಪ ಕೇಂದ್ರ
1	ತಾಲ್ಲೂಕು ಆಸ್ಪತ್ರೆ ಹಳಿಯಾಳ	2	2					2	1
2	ಪ್ರಾ.ಆ.ಕೇಂದ್ರ ಯಡೋಗಾ	1							4
3	ಪ್ರಾ.ಆ.ಕೇಂದ್ರ ಮುರ್ಕವಾಡ	1 (ರಿಪೇರಿ)		1	1	1			5 (1 ರಿಪೇರಿ)
4	ಪ್ರಾ.ಆ.ಕೇಂದ್ರ ಬೆಳವಟಗಿ								2 (1 ರಿಪೇರಿ)
5	ಪ್ರಾ.ಆ.ಕೇಂದ್ರ ಸಾಂಬ್ರಾಣಿ	1 (ರಿಪೇರಿ)		1	1	1			4
6	ಪ್ರಾ.ಆ. ಕೇಂದ್ರ ಭಾಗವತಿ								3 (1 ರಿಪೇರಿ)
7	ಪ್ರಾ.ಆ. ಕೇಂದ್ರ ಮಂಗಳವಾಡ								3 (1 ರಿಪೇರಿ)

ಜೋಯಿಡಾ ತಾಲ್ಲೂಕು ವಸತಿ ಗೃಹಗಳ ಮಾಹಿತಿ

ಕ್ರ.ಸಂ.	ಆರೋಗ್ಯ ಸಂಸ್ಥೆಗಳ ಹೆಸರು	ವಸತಿ ಗೃಹಗಳು									
		ವೈದ್ಯಾಧಿಕಾರಿ	ಶುಶ್ರೂಷಕಿ	ಹಿ.ಪು.ಆ.ಸ	ಹಿ.ಮ.ಆ.ಸ	ಕ್ಷೇ.ಆ.ಶಿ	ಪ್ರ.ದ.ಸ.	ಫಾರ್ಮಾಸಿಸ್ಟ್	ವಾಹನ ಚಾಲಕ	ಗ್ರೂಪ್ ಡಿ	ಕೆ.ಮ.ಆ.ಸ ಉಪಕೇಂದ್ರ
1	ತಾಲ್ಲೂಕು ಆಸ್ಪತ್ರೆ ಜೋಯಿಡಾ	2		1 (ರಿಪೇರಿ)	1 (ರಿಪೇರಿ)	1 (ರಿಪೇರಿ)	1 (ರಿಪೇರಿ)	1 (ರಿಪೇರಿ)		2	
2	ಪ್ರಾ.ಆ.ಕೇಂದ್ರ ರಾಮನಗರ	2 (ರಿಪೇರಿ)	2 (ರಿಪೇರಿ)							2 (ರಿಪೇರಿ)	2 (ರಿಪೇರಿ)

ಶ್ರೀ ಸುನೀಲ್ ವಿ. ಹೆಗಡೆ: ಮಾನ್ಯ ಅಧ್ಯಕ್ಷರೆ, ಉತ್ತರ ಒದಗಿಸಿದ್ದಾರೆ. ಆದರೆ, ಸನ್ಮಾನ್ಯ ಆರೋಗ್ಯ ಸಚಿವರಲ್ಲಿ ನಾನು ಕೇಳುವುದಿಷ್ಟೆ. ಅಲ್ಲಿರುವ ಸೂಪಾ ಪುನರ್ವಸತಿ ಕೇಂದ್ರದಲ್ಲಿ ಸುಮಾರು 8 ರಿಂದ 10 ಸಾವಿರ ಜನಸಂಖ್ಯೆ ಇದೆ. ನಾನು ಹಲವಾರು ಸಾರಿ Hospital ಗೆ ಹೋದಾಗ 2 ರಿಂದ 3 bed ಮಾತ್ರ use ಇದೆ. ಉಳಿದ ಕಡೆ ಎಲ್ಲಾ ಸೋರುತ್ತಿದೆ. ಸರಿಯಾದ ರೀತಿಯ infrastructure ಏನೂ ಇಲ್ಲ. ವೈದ್ಯರ ಕೊರತೆ ಇದೆ. ಗೋವಾಕ್ಕೆ ಹೋಗುವ Highway ಮೇಲೆ ಇದು ಬರುತ್ತಿರುವುದರಿಂದ ಅಲ್ಲಿ ಏನಾದರೂ accident ಆದರೆ ಅಲ್ಲಿ ಯಾವುದೇ ರೀತಿಯ specialties ಇರುವುದಿಲ್ಲ. ಹೀಗಾಗಿ ಅದನ್ನು ರಿಪೇರಿ ಮಾಡಲಿಕ್ಕೆ 60 bed Hospital ಆಗಿ up-gradation ಮಾಡಲಿಕ್ಕೆ ನಾನು ವಿನಂತಿ ಮಾಡಿದ್ದೆ. ಆದರೆ, ಕೇವಲ ರೂ. 75,000/– ರಿಪೇರಿಗಾಗಿ ಕೊಟ್ಟಿದ್ದೇವೆಂದು ಹೇಳುತ್ತಾರೆ. ಖಂಡಿತವಾಗಿಯೂ ಈ ರೂ. 75,000/– ರೂಪಾಯಿಗಳು ಏನೂ ಸಾಲುವುದಿಲ್ಲ. ಕನಿಷ್ಠ ಪಕ್ಷ 10 ರಿಂದ 15 ಲಕ್ಷ ರೂಪಾಯಿಗಳ ಕೆಲಸವಿದೆ. ಅದನ್ನು upgrade ಮಾಡಿದರೆ ಸುತ್ತಮುತ್ತಲಿರುವಂಥವರೆಲ್ಲರಿಗೂ ಒಳ್ಳೆಯದಾಗುತ್ತದೆ ಮತ್ತು Highway ಮೇಲೆ ಇರುವುದರಿಂದ ಎಲ್ಲರಿಗೂ ಅನುಕೂಲವಾಗುತ್ತದೆ ಎನ್ನುವ ದೃಷ್ಟಿಯಿಂದ ನಾನು ಸರ್ಕಾರಕ್ಕೆ ವಿನಂತಿ ಮಾಡುತ್ತೇನೆ.

ಶ್ರೀಅರವಿಂದ ಲಿಂಬಾವಳಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯ ನಮ್ಮ ಗಮನದಲ್ಲಿದೆ. ಅಲ್ಲಿ ಕಟ್ಟಡ ಬಹಳ ಶಿಥಿಲಗೊಂಡಿದೆ ಎಂದು ನಮ್ಮ ಗಮನಕ್ಕೆ ತಂದಿದ್ದಾರೆ. ಬಜೆಟ್ ಸೆಷನ್ ಹೇಗಿದ್ದರೂ ಈಗ ನಡೆಯುತ್ತಿದೆ. ಈ ವರ್ಷದ ಬಜೆಟ್‌ನಲ್ಲಿ ವಿಶೇಷವಾಗಿ ಇಡೀ ಕಟ್ಟಡಕ್ಕೆ ಅವಶ್ಯಕತೆ ಇರತಕ್ಕಂಥ ಸಂಪೂರ್ಣವಾದ ಹಣವನ್ನು ನಿಶ್ಚಿತವಾಗಿ ಕೊಟ್ಟು ಅದನ್ನು renovation ಮಾಡುತ್ತೇವೆ. Up-gradation ಮಾಡಬೇಕೆಂದು ಕೇಳಿದರು. 3 ವರ್ಷ ಯಾವುದೇ ಆಸ್ಪತ್ರೆಯನ್ನು upgrade ಮಾಡಬಾರದು ಎನ್ನುವ ಒಂದು ನೀತಿಯನ್ನು ಸರ್ಕಾರ ತೆಗೆದುಕೊಂಡಿದೆ. ಹೀಗಾಗಿ ಅದು 20 bed ನ

ಆಸ್ಪತ್ರೆ, ಅದನ್ನು upgrade ಮಾಡದೇ improve ಮಾಡುವುದಕ್ಕೆ ಏನೇನು ಕ್ರಮಗಳು ಕೈಗೊಳ್ಳಬೇಕೋ ಆ ಕ್ರಮಗಳನ್ನು ಕೈಗೊಳ್ಳುತ್ತೇನೆ.

ಮುಜರಾಯಿ ಇಲಾಖೆ ದೇವಸ್ಥಾನಗಳು
ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 10 (03)

ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ)

ಅ) ಮೈಸೂರು ತಾಲ್ಲೂಕಿನ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವ ದೇವಾಲಯಗಳ ಸಂಖ್ಯೆ ಎಷ್ಟು;

ಆ) ಈ ದೇವಾಲಯಗಳ ಅಭಿವೃದ್ಧಿ / ಜೀರ್ಣೋದ್ಧಾರಕ್ಕಾಗಿ ಕಳೆದ 3 ವರ್ಷಗಳಿಂದ ಬಿಡುಗಡೆಯಾಗಿರುವ ಅನುದಾನವೆಷ್ಟು;

ಬಿಡುಗಡೆಯಾಗಿರುವ ಅನುದಾನದಲ್ಲಿ ಎಷ್ಟು ಖರ್ಚು ಮಾಡಲಾಗಿದೆ;

ಇ) ಬಿಡುಗಡೆಯಾದ ಅನುದಾನದಲ್ಲಿ ಬಹಳಷ್ಟು ಅನುದಾನವು ವಿನಿಯೋಗಿಸದೇ ಬಾಕಿ ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆ3ಯೇ; ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಮುಜರಾಯಿ ಇಲಾಖೆ ವ್ಯಾಪ್ತಿಯಲ್ಲಿ ಬರುವ ಶ್ರೀ ಚಾಮುಂಡಿ ಬೆಟ್ಟ ಅಭಿವೃದ್ಧಿ ಪ್ರಾಧಿಕಾರವನ್ನು ರಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; ಹಾಗಿದ್ದಲ್ಲಿ ಈ ಪ್ರಾಧಿಕಾರವನ್ನು ಯಾವಾಗ ರಚಿಸಲಾಗುವುದು?

ಶ್ರೀ ಕೋಟಾ ಶ್ರೀನಿವಾಸ ಪೂಜಾರಿ (ಮುಜರಾಯಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು)

ಅ) 332 ಅಧಿಸೂಚಿತ ಸಂಸ್ಥೆಗಳು ಇರುತ್ತವೆ.

ಆ) ಕಳೆದ 3 ವರ್ಷಗಳಲ್ಲಿ ಬಿಡುಗಡೆಯಾಗಿರುವ ದೇವಾಲಯಗಳ ವಿವರ ಈ ಕೆಳಕಂಡಂತೆ ಇರುತ್ತದೆ.